**SC No. 257/2021**
**PW-15**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 257/2021**

| | | |
|---|---|---|
| ಸಾಕ್ಷಿದಾರರ ಹೆಸರು | ಡಾ. ರಾಧ ಎಸ್. | ಪ್ರಮಾಣ ವಚನ ಮಾಡಿದ ದಿನಾಂಕ: 17.12.2025 |
| ತಂದೆಯ/ಗಂಡನ ಹೆಸರು | ಶ್ರೀನಿವಾಸ್ | |
| ವಯಸ್ಸು | 50 ವರ್ಷ | |
| ವೃತ್ತಿ | ಸಹಾಯುಕ ನಿರ್ದೇಶಕರು ಆರ್ ಎಫ್ ಎಸ್ ಎಲ್ ಮೈಸೂರು | ಪ್ರಾ.ಸಾಃ 15 |
| ವಾಸ ಸ್ಥಳ | ಮೈಸೂರು | ಚಾ.ಸಾಃ 16 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು *2011* ನವೆಂಬರ್ ನಿಂದ ಇಲ್ಲಿಯವರೆಗೂ ಆರ್ ಎಫ್ ಎಸ್ ಎಲ್ ಮೈಸೂರ್ ನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ *04.11.2020* ರಂದು ಕೃಷ್ಣರಾಜು ಪೊಲೀಸ್ ಠಾಣೆಯ ಮುಖ್ಯ ಪೇದೆ *652* ಮಂಜುನಾಥ ರವರು ಅವರ ಠಾಣಾ ಮೊಕದ್ದಮೆ ಸಂಖ್ಯೆ *97/2020* ಕ್ಕೆ ಸಂಬಂಧಿಸಿದಂತೆ *4* ಸೀಲಾದ ವಸ್ತುಗಳನ್ನು ವಿಶ್ಲೇಷಣೆಗಾಗಿ ನಮ್ಮ ಕಚೇರಿಗೆ ತಂದಿದ್ದರು. ನಮ್ಮ ಸ್ವಾಗತ ವಿಭಾಗದವರು ಆ ವಸ್ತುಗಳನ್ನು ಸ್ವೀಕರಿಸಿ ಅವುಗಳಿಗೆ ಕಚೇರಿಗೆ ಸಂಖ್ಯೆ

ಆರ್ ಎಫ್ ಎಸ್ ಎಲ್/ಬಿ ಎಸ್ *748/2020* ಎಂದು ನೀಡಿ ನಮ್ಮ ಜೀವ ಶಾಸ್ತ್ರ ವಿಭಾಗಕ್ಕೆ ಕಳುಹಿಸಿದ್ದರು. ನಾನು ಸದರಿ ವಸ್ತುಗಳನ್ನು ಸ್ವೀಕರಿಸಿ ಅವುಗಳನ್ನು ವಿಶ್ಲೇಷಣೆಗಾಗಿ ತೆಗೆದುಕೂಂಡು ನೋಡಲಾಗಿ ಅವುಗಳ ಮೇಲಿದ್ದ ಸೀಲುಗಳು ಸುಸ್ಥಿತಿಯಲ್ಲಿದ್ದವು ಮತ್ತು ತನಿಖಾಧಿಕಾರಿಯವರು ಕಳುಹಿಸಿದ್ದ ಮಾದರಿ ಸೀಲಿಗೆ ಮತ್ತು ವಿವರಣೆಗಳಿಗೆ ಹೋಲಿಕೆ ಆಗುತ್ತಿತ್ತು. ನಾನು ಸದರಿ ವಸ್ತುಗಳನ್ನು ತೆಗೆದು ನೋಡಲಾಗಿ ಅವುಗಳು ಈ ಕಳೆಕಂಡತೆ ಇದ್ದವು.

*1)* ಡಾಂಬರ್ ಪೀಸುಗಳು

*2)* ಮಾದರಿ ಡಾಂಬರ್ ಪೀಸುಗಳು

*3)* ಒಂದು ಟೀ ಶರ್ಟ್

*4)* ಒಂದು ರೇಜರ್

ನಾನು ಸದರಿ ವಸ್ತುಗಳನ್ನು ರಸಾಯನಿಕ ಮತ್ತು ಸಿರಾಲಾಜಿ ಪರೀಕ್ಷೆಗ ಒಳಪಡಿಸಿದ್ದೆನು. ನನ್ನ ಪರೀಕ್ಷಾ ಫಲಿತಾಂಶದಂತೆ ವಸ್ತು ಸಂಖ್ಯೆ *1, 3* ಮತ್ತು *4* ರಲ್ಲಿ ರಕ್ತದ ಕಲೆಗಳು ಕಂಡು ಬಂದಿದದ್ದವು. ವಸ್ತು ಸಂಖ್ಯೆ *1* ಮತ್ತು *3* ರಲ್ಲಿ ಇದ್ದ ರಕ್ತದ ಕಲೆಗಳು ಮನುಷ್ಯನ ಬಿ ಗುಂಪಿಗೆ ಸೇರಿದ ರಕ್ತದ ಕಲೆಯಾಗಿತ್ತು. ವಸ್ತು ಸಂಖ್ಯೆ *4* ರಲ್ಲಿ ಇದ್ದಂತಹ ರಕ್ತದ ಕಲೆಗಳು ಅತ್ಯಲ್ಪ ಪ್ರಮಾಣದಲಿದ್ದು ಸಿರಾಲಜಿ ಪರೀಕ್ಷೆಗೆ ಸಾಕಾಗಿರುವುದಿಲ್ಲ.

ಆದ್ದರಿಂದ ಅವುಗಳ ಮೂಲ ಮತ್ತು ಗುಂಪನ್ನು ಕಂಡುಹಿಡಿಯಲು ಆಗಿರುವುದಿಲ್ಲ. ಅದರಂತೆ ನನ್ನ ಅಭಿಪ್ರಾಯ ವರದಿಯನ್ನು ನಮ್ಮ ಉಪ ನಿರ್ದೇಶಕರ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ನೀಡಿದ್ದೆನು. ಪರೀಕ್ಷೆಯಾದ ನಂತರ ವಸ್ತು ಸಂಖ್ಯೆ *1* ರಿಂದ *4* ನ್ನು ಮರು ಪ್ಯಾಕ್ ಮಾಡಿ ನಮ್ಮ ಕಚೇರಿಯ ಅರಗು ಸೀಲ್ ನೊಂದಿಗೆ ಮೊಹರು ಮಾಡಿ ಸಂಬಂಧಿಸಿದ ಪೋಲಿಸರಿಗೆ ವಾಪಾಸ್ ನೀಡಿರುತ್ತೇನೆ. ನಾನು ಪರೀಕ್ಷೆ ಮಾಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ನಾನು ನನ್ನ ವರದಿಯೊಂದಿಗೆ ಮಾದರಿ ಸೀಲನ್ನು ಲಗತ್ತಿಸಿದ್ದೆನು. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*15* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *15(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಮಾದರಿ ಸೀಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*16* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*16(ಎ)* ಎಂದು ಗುರುತಿಸಲಾಯಿತು. ನಾನು ಆ ದಿನ ಪರೀಕ್ಷೆಗೆ ಒಳಪಡಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ-*1* ರಿಂದ *4* ಎಂದು ಗುರುತಿಸಲ್ಪಟ್ಟಿರುತ್ತವೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದ** :

ನಮ್ಮ RFSL ಗೆ ವಸ್ತುಗಳು ಬಂದಾಗ ಆ ವಸ್ತುಗಳನ್ನು ವಾಪಸ್ಸು ಕಳುಹಿಸುವಾಗ ಸೀಲು ಮತ್ತು ಸಹಿ ಹಾಕಿ ಕಳುಹಿಸುತ್ತೇವೆ ಎಂದರೆ ಸರಿ. ಎಂ.ಒ–1 ರಿಂದ 4 ರ ಮೇಲೆ ನಾವು ನಮ್ಮ ಕಛೇರಿಯ ಮೊಹರನ್ನು ಹಾಕಿ ಪ್ರತ್ಯೇಕವಾದ ಚೀಟಿ ಅಂಟಿಸಿ ಕಳುಹಿಸುತ್ತೇವೆ

ಎಂದರೆ ಸರಿಯಲ್ಲ. ಎಂ.ಒ–1 ರಿಂದ 4 ಅನ್ನು ನಮ್ಮ ಕಛೇರಿಗೆ ಕಳುಹಿಸಿದ್ದರು ಎನ್ನುವ ಬಗ್ಗೆ ಯಾವುದೇ ವಿಶೇಷ ಗುರುತುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಎಂ.ಒ–1 ರಿಂದ 4 ಅನ್ನು ನಮ್ಮ ಕಛೇರಿಗೆ ಕಳುಹಿಸುವಾಗ ಅವರ ಸೀಲನ್ನು ಹಾಕುತ್ತಾರೆ ನಾವು ವಾಪಸ್ಸು ಕಳುಹಿಸುವಾಗ ನಮ್ಮ ಕಛೇರಿಯ ಸೀಲು ಹಾಕುತ್ತೇವೆ. ನಮಗೆ ಮಾದರಿ ರಕ್ತವನ್ನು ಈ ಪ್ರಕರಣದಲ್ಲಿ ಕಳುಹಿಸಿರುವುದಿಲ್ಲ. ನಾನು ನನ್ನ ವರದಿಯಲ್ಲಿ ನಾನು ನೋಡಿದಂತಹ ವಸ್ತುಗಳ ಮೇಲೆ ಇದ್ದಂತಹ ರಕ್ತದ ಕಲೆ ಆ ಬಿ ಗುಂಪಿನ ಉಪ ಗುಂಪನ್ನು ಹೇಳಿರುವುದಿಲ್ಲ. ಪೊಲೀಸರು ಕೊಟ್ಟಂತಹ ಮನವಿ ಆಧಾರದ ಮೇಲೆ ನಾನು ಎಂ.ಒ–1 ರಿಂದ 4 ಅನ್ನು ಪರೀಕ್ಷೆಗೆ ಒಳಪಡಿಸದೇ ನಿಪಿ–15 ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಿಂದ :**

2 ನೇ ಆರೋಪಿ ಪರ ವಕೀಲು 1 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲಿನಂತೆಯೇ ತನ್ನ ಪಾಟೀ ಸವಾಲು ಇರುತ್ತದೆ ಎಂದು ತಿಳಿಸಿರುತ್ತಾರೆ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.**